ಕೆಲವೇ ವಾರಗಳಲ್ಲಿ **'ವಿವೇಕಾನಂದರ ಕೃತಿಶ್ರೇಣಿ'**ಯನ್ನು ಓದಿ ಮುಗಿಸಿಬಿಟ್ಟೆ!

ವಿವೇಕಾನಂದರ ಎರಡು ಪುಸ್ತಕಗಳು ವಿಶೇಷವಾಗಿ ನನ್ನ ಗಮನ ಸೆಳೆದವು. ಮೊದಲನೆಯದು 'His call to the Nation' ಮತ್ತಿನ್ನೊಂದು 'To the youth of India'. ಅವನ್ನು ಓದುತ್ತಾ ಹೋದಂತೆ ನನ್ನ ಮನಸ್ಸು ತುಂಬಾ ತಿಳಿಯಾಯಿತು; ಗೊಂದಲಗಳು ನಿವಾರಣೆಯಾದವು. ನನಗೇನಾದರೂ ವೈದ್ಯಕೀಯ ವ್ಯಾಸಂಗ ಮಾಡಲು ಅವಕಾಶ ಸಿಕ್ಕರೆ, ವಿವೇಕಾನಂದರು ಕರೆಕೊಟ್ಟಂತೆ ಹಳ್ಳಿಗಳಿಗೆ ಹೋಗಿ ಸೇವೆ ಮಾಡಲು ನಿರ್ಧರಿಸಿದೆ.

**೨೯ ಸೆಪ್ಟೆಂಬರ್ ೧೯೮೨** : ಆ ದಿನ ನನಗೆ ಇನ್ನೂ ನೆನಪಿದೆ. ನಾನವತ್ತು ಬಹಳ ಉತ್ಸುಕನಾಗಿದ್ದೆ. ರಚನಾತ್ಮಕವಾಗಿ ಏನಾದರೂ ಮಾಡಬೇಕೆಂದು ಕಾತರಿಸುತ್ತಿದ್ದೆ. ಸ್ವಾಮೀಜಿಯ ವಿಚಾರಧಾರೆಗಳ ಪ್ರಭಾವವೇ ಅಂಥದ್ದು! ಮನೆಗೆ ಬಂದು ನೋಡಿದರೆ ಚಮತ್ಕಾರವೆಂಬಂತೆ ಒಂದು ಟೆಲಿಗ್ರಾಮ್ ನನ್ನನ್ನು ಕಾಯುತ್ತಿತ್ತು. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಕಳುಹಿಸಿದ್ದ ಆ ಟೆಲಿಗ್ರಾಮ್‌ನಲ್ಲಿ ತಕ್ಷಣವೇ ಮೈಸೂರು ಮೆಡಿಕಲ್ ಕಾಲೇಜಿಗೆ ಬಂದು ವೈದ್ಯಕೀಯ ವ್ಯಾಸಂಗಕ್ಕೆ ಸೇರಿಕೊಳ್ಳಬೇಕೆಂದು ತಿಳಿಸಲಾಗಿತ್ತು. ಕಾಣದ ಕೈಯೊಂದು ನನ್ನ ಜೀವನದ ಗುರಿ–ಧ್ಯೇಯವನ್ನು ಚಿತ್ರಿಸುತ್ತಿರುವಂತೆ ನನಗೆ ಭಾಸವಾಯಿತು.

೧೯೮೨ ರಿಂದ ಇಂದಿನವರೆಗೆ ವಿವೇಕಾನಂದರನ್ನು ಅರ್ಥಮಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿದ್ದೇನೆ. ಅವರ ಒಂದು ವಿಶೇಷ ಗುಣವೆಂದರೆ – **ಬಡವರ ಹಾಗೂ ನಿರ್ಗತಿಕರ ಬಗೆಗಿನ ಅಪಾರವಾದ ಕಾಳಜಿ.** ಅವರನ್ನೇ 'ದೇವರು' ಎಂದು ಪರಿಗಣಿಸುತ್ತಿದ್ದ ವಿವೇಕಾನಂದರು, ಅವರ ಉನ್ನತಿ ಮತ್ತು ಉದ್ಧಾರಕ್ಕಾಗಿ ಹಗಲಿರುಳೂ ಚಿಂತಿಸುತ್ತಿದ್ದರು. ನನಗೆ ಇಷ್ಟವಾದ ವಿವೇಕಾನಂದರ ಮತ್ತೊಂದು ಗುಣವೆಂದರೆ ಅವರ **'ಮಾನವೀಯತೆ'**. "ಮನುಕುಲದ ಉದ್ಧಾರಕ್ಕಾಗಿ ಕೆಲಸ ಮಾಡಲು ಮತ್ತೆ ಮತ್ತೆ ಜನ್ಮ ತಾಳಿ ಬರಲು ನಾನು ಸಿದ್ಧನಾಗಿದ್ದೇನೆ" ಎಂದು ಅವರು ಅನೇಕ ಬಾರಿ ಘೋಷಿಸಿದ್ದಾರೆ.

ಭಾರತದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ವಿವೇಕಾನಂದರ ವಿಚಾರಧಾರೆಯಿಂದ ಸ್ಫೂರ್ತಿ ಪಡೆದಿದ್ದಾರೆ. ಸುಭಾಷ್‌ಚಂದ್ರ ಬೋಸ್‌ರಿಂದ ರಾಜಗೋಪಾಲಾಚಾರಿಯವರವರೆಗೆ ಎಲ್ಲರೂ ವಿವೇಕಾನಂದರನ್ನು ಒಬ್ಬ ಪ್ರಬಲ ರಾಷ್ಟ್ರವಾದಿಯನ್ನಾಗಿ ಕಂಡಿದ್ದಾರೆ. ಇಷ್ಟವಾಗುವ ಅವರ ಮತ್ತೊಂದು ಗುಣವೆಂದರೆ **'ಸತ್ಯಕ್ಕಾಗಿ ನಿರಂತರ ಪರಿಶೋಧನೆ'**. ಅರ್ಧಸತ್ಯವನ್ನು ಅವರು ಎಂದೂ ಒಪ್ಪುತ್ತಿರಲಿಲ್ಲ. ಸ್ವಂತ ಅನುಭವದಿಂದ ಹೊರಹೊಮ್ಮುವ ವಿಚಾರಗಳು ಸತ್ಯಕ್ಕೆ ಹತ್ತಿರವಾದುವು ಎಂದು ಅವರು ಪರಿಗಣಿಸುತ್ತಿದ್ದರು. ಅವರು ಈ ರಾಷ್ಟ್ರ ಕಂಡ ಅತ್ಯುತ್ತಮ ನಾಯಕರಲ್ಲೊಬ್ಬರು. ಯಾವುದೇ ಪದವಿ ಅಥವಾ ಅಧಿಕಾರದ ಬಲವಿಲ್ಲದಿದ್ದರೂ ಇಡೀ ರಾಷ್ಟ್ರದ ಜನಮಾನಸವನ್ನು ತಮ್ಮ ಕೆಲಸ ಹಾಗೂ ವಿಚಾರಧಾರೆಯಿಂದ ಪ್ರಭಾವಿತಗೊಳಿಸಿದ್ದರು. ಎಲ್ಲರಿಂದಲೂ ಅತ್ಯುತ್ತಮವಾದುದ್ದನ್ನೇ ನಿರೀಕ್ಷಿಸುತ್ತಿದ್ದರು. ಕೆಳಮಟ್ಟದ ಅಥವಾ ಮಧ್ಯಮ ವಿಚಾರಗಳಿಗೆ ಅವರ ಬತ್ತಳಿಕೆಯಲ್ಲಿ ಸ್ಥಳವೇ ಇರಲಿಲ್ಲ. ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರನ್ನೂ ಉತ್ತೇಜಿತರನ್ನಾಗಿ ಮಾಡುತ್ತಿದ್ದರು. ಇದಕ್ಕೆ ಅವರು ಬರೆದಿರುವ ಪತ್ರಗಳೇ ಸಾಕ್ಷಿ. ಭಾರತವನ್ನು ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವನ್ನಾಗಿಸುವ ಕುರಿತು ಅವರು ಸದಾ ಕನಸು ಕಾಣುತ್ತಿದ್ದರು.

ಅತ್ಯಂತ ಸ್ಫುಟವಾದ ಹಾಗೂ ವಾಸ್ತವಿಕತೆಗೆ ಹತ್ತಿರವಾದ ಆಡಳಿತ ಸೂತ್ರಗಳನ್ನಾಧರಿಸಿದ ಸಂಸ್ಥೆಯೊಂದನ್ನು ವಿವೇಕಾನಂದರು ಕಟ್ಟಿದರು. ಅವರು ಹಾಕಿಕೊಟ್ಟ ಮಾರ್ಗದರ್ಶಿ ಸೂತ್ರಗಳು ಇಂದಿಗೂ ಪ್ರಸ್ತುತವಾಗಿವೆ. ಅವರು ಹಳೆಯದನ್ನು ಸದಾ ಒರೆಗೆ ಹಚ್ಚುತ್ತಾ, ಹೊಸತನ್ನು ಹುಡುಕುತ್ತಾ ಸಾಗಿದರು. ತಮ್ಮ ಅನುಯಾಯಿಗಳಿಗೂ ಇದನ್ನೇ ಮಾಡಲು ಪ್ರೇರೇಪಿಸಿದರು.

ಅವರ ಸಮಾಜವಾದ ನನ್ನನ್ನು ಬಹಳಷ್ಟು ಆಕರ್ಷಿಸಿತು. **"ದೀನ–ದಲಿತರ ಕಣ್ಣೀರು ಒರೆಸದ ಹಾಗೂ ಹಸಿವನ್ನು ನೀಗಿಸದ ದೇವರು ಅಥವಾ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ"** ಎಂಬ ವಿವೇಕಾನಂದರ ಮಾತು ನನಗೆ ಬಹಳಷ್ಟು ಹಿಡಿಸಿತು. ಮಹಿಳೆಯರ ಉನ್ನತೀಕರಣ ಹಾಗೂ ದುರ್ಬಲರ ಸಬಲೀಕರಣಕ್ಕೆ ಸಂಬಂಧಿಸಿದ ಅವರ ವಿಚಾರಗಳಲ್ಲಿ ಬಹಳ ದೂರದರ್ಶಿತ್ವ ಹಾಗೂ ಸಾಮಾಜಿಕ ಕಳಕಳಿ ಇತ್ತು. ಅಭಿವೃದ್ಧಿ ಕುರಿತಂತೆ ನನ್ನ ಚಿಂತನೆ ಹಾಗೂ ಕಾರ್ಯಗಳಿಗೆ ವಿವೇಕಾನಂದರ ವಿಚಾರಗಳೇ ಅಡಿಗಲ್ಲಾಗಿವೆ ಎಂದರೆ ತಪ್ಪಾಗಲಾರದು.


ವಿವೇಕಾನಂದರು ವೇದಗಳು, ಬೈಬಲ್, ಕುರಾನ್ – ಎಲ್ಲವನ್ನೂ ಆಳವಾಗಿ ಬಲ್ಲವರಾಗಿದ್ದರು. ಜಗತ್ತಿನ ಯಾವುದೇ ವಿಚಾರದ ಬಗ್ಗೆ ಅಧಿಕಾರಯುತವಾಗಿ ಮಾತನಾಡುವ ಶಕ್ತಿ ಹಾಗು ಜಾಣ್ಮೆ ಹೊಂದಿದ್ದರು. Encyclopedia Britannica ಎಂಬ ಬೃಹದ್ಗ್ರಂಥವನ್ನು ಕೆಲವೇ ದಿನಗಳಲ್ಲಿ ಓದಿ ಅರಗಿಸಿಕೊಂಡಿದ್ದರು ಎಂದು ಹೇಳಲಾಗುತ್ತದೆ.

ವಿವೇಕಾನಂದರ ಬಗ್ಗೆ ಹೀಗೆ ಎಷ್ಟು ಹೇಳಿದರೂ ಕಡಿಮೆಯೇ. ಅವರನ್ನು ಪ್ರತಿ ಸಾರಿ ಓದಿದಾಗಲೂ, ಹೊಸತೊಂದು ಬೆಳಕಿನಲ್ಲಿಯೇ ನನಗೆ ಅವರು ಕಾಣುತ್ತಾರೆ. ಅವರ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಹೀಗೆಯೇ ಹೊಸ ಅನುಭವಗಳು ಆದೀತೇನೋ? ಅದೇನೇ ಇರಲಿ, ವಿವೇಕಾನಂದರು ಭಾರತ ಮಾತೆಯ ಅತ್ಯಂತ ಹೆಮ್ಮೆಯ ಪುತ್ರರಲ್ಲೊಬ್ಬರು ಮತ್ತು ಅವರ ವಿಚಾರಧಾರೆ ಇಂದಿನ ಭಾರತಕ್ಕೆ ಮೊದಲಿಗಿಂತಲೂ ಪ್ರಸ್ತುತ ಎಂಬುದು ಎಲ್ಲರೂ ಒಪ್ಪಲೇಬೇಕಾದ ಸಂಗತಿ. ✱

**ಯುವಜನರನ್ನು ಒಂದುಗೂಡಿಸಿ ಸಂಘಬದ್ಧರಾಗಿ ದುಡಿಯುವಂತೆ ಮಾಡಲೆಂದೇ ನಾನು ಜನ್ಮತಾಳಿದ್ದೇನೆ. – ಸ್ವಾಮಿ ವಿವೇಕಾನಂದ**

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು


ಕೆ.ಆರ್. ಮೋಹನ್


ಚಿತ್ರ : ೩

### ಚಿತ್ರ ೩

೧೮೮೬ನೇ ಇಸವಿಯಲ್ಲಿ ಕಾಶೀಪುರ ಉದ್ಯಾನಗೃಹದಲ್ಲಿ ಧ್ಯಾನಕ್ಕೆ ಕುಳಿತಾಗ ನರೇಂದ್ರನಿಗೆ ಒಂದು ಅನಿರ್ವಚನೀಯ ಅನುಭವವಾಯಿತು. ಶ್ರೀರಾಮಕೃಷ್ಣರ ಸಂಕಲ್ಪಮಾತ್ರದಿಂದ ಆತನು ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಹೊಂದಿ ಬೇರೆಯೇ ಲೋಕದಲ್ಲಿ ವಿಹರಿಸುತ್ತಿದ್ದಾನೆ. ಸ್ವಲ್ಪ ಎಚ್ಚರಗೊಂಡು ಮೆಲ್ಲಗೆ ಕಣ್ತೆರೆದು ನೋಡುತ್ತಾನೆ. ಅವನಿಗೆ ತನ್ನ ಮುಖದ ಇರುವಿಕೆ ಮಾತ್ರ ಗೊತ್ತಾಗುತ್ತಿದೆ. ಇತರ ಅವಯವಗಳ ಮೇಲಿನ ಪ್ರಜ್ಞೆ ಮರಳಿಲ್ಲ. "ಓ ಗೋಪಾಲ್ ದಾ! ನನ್ನ ದೇಹ ಎಲ್ಲಿ? ನನ್ನ ದೇಹ ಎಲ್ಲಿ?" ಎಂದು ಕೂಗಿಕೊಳ್ಳುತ್ತಾನೆ. ಗೋಪಾಲ್, "ನರೇನ್, ಇಲ್ಲೇ ಇದೆಯಲ್ಲ!" ಎಂದು ಗಟ್ಟಿಯಾಗಿ ಹೇಳುತ್ತ, ಅವನ ಮೈ ಮುಟ್ಟಿ ನೋಡುತ್ತಾನೆ. ಅದು ಮರದ ಕೊರಡಿನಂತಾಗಿಬಿಟ್ಟಿದೆ. ನಿಶ್ಚೇಷ್ಟಿತನಾಗಿ ನರೇಂದ್ರ ಬಿದ್ದಿದ್ದಾನೆ; ಕುಟುಕು ಜೀವ ಮಾತ್ರ ಇದೆ. ಗುರುಭಾಯಿಗಳು ಓಡೋಡಿ ಬಂದು, "ನರೇಂದ್ರನಿಗೆ ಏನೋ ಆಗಿದೆ" ಎಂದು ಶ್ರೀರಾಮಕೃಷ್ಣರಿಗೆ ತಿಳಿಸಿದರು. ಅವರು, "ಇರಲಿ, ಇರಲಿ, ಸ್ವಲ್ಪ ಹೊತ್ತು ಹಾಗೆಯೇ ಇರಲಿ. ಈ ಅನುಭವಕ್ಕಾಗಿ ನನ್ನನ್ನು ಸಾಕಷ್ಟು ಪೀಡಿಸಿದ್ದಾನೆ" ಎಂದು ಶಾಂತವಾಗಿ ನುಡಿದರು.

ದಿವ್ಯಾನಂದದಿಂದ ನಿಧಾನವಾಗಿ ಹೊರಬಂದ ಮೇಲೆ ನರೇಂದ್ರ ಮೌನವಾಗಿ ಶ್ರೀರಾಮಕೃಷ್ಣರ ಮುಂದೆ ನಿಂತ. ಅವನ ಕಂಗಳಲ್ಲಿ ತಮ್ಮ ದೃಷ್ಟಿಯನ್ನು ನೆಟ್ಟು ಶ್ರೀರಾಮಕೃಷ್ಣರು ಗಂಭೀರವಾಗಿ ನುಡಿದರು: "ಜಗನ್ಮಾತೆ ನಿನಗೆ ಏನನ್ನು ತೋರಿಸಿದಳೋ, ನಿನ್ನ ಈ ಎಲ್ಲ ಅನುಭವಕ್ಕೆ ಬೀಗ ಮುದ್ರೆ ಹಾಕಿದೆ. ಅದರ ಕೀಲಿಕೈ ನನ್ನ ಬಳಿಯಿದೆ. ನೀನು ಸಾಧಿಸಬೇಕಾದ ಕೆಲಸಗಳು ಮುಗಿದ ಮೇಲೆ ಮತ್ತೆ ಆ ಬೀಗವನ್ನು ತೆರೆಯಲಾಗುವುದು. ಆಗ ಮಾತ್ರ ಆ ನಿಧಿಯು ಮತ್ತೆ ನಿನ್ನದಾಗುವುದು."


ಚಿತ್ರ : ೪

### ಚಿತ್ರ ೪

ಮೇಲಿನ ಛಾಯಾಚಿತ್ರದ ಬಗ್ಗೆ ಸ್ವಾಮಿ ಅಭೇದಾನಂದರು ಈ ರೀತಿ ವಿವರಣೆ ಕೊಟ್ಟಿದ್ದಾರೆ: "೧೬ . ೮. ೧೮೮೬ ರಂದು ಶ್ರೀರಾಮಕೃಷ್ಣರ ಮಹಾಸಮಾಧಿಯಾದ ಸುದ್ದಿ ಎಲ್ಲೆಡೆ ಹಬ್ಬಿ, ಭಕ್ತಾದಿಗಳು ಕಾಶೀಪುರ ಉದ್ಯಾನಗೃಹಕ್ಕೆ ಬಂದರು. ಬೆಳಿಗ್ಗೆ ೧೦ ಘಂಟೆಗೆ ಡಾ. ಮಹೇಂದ್ರಲಾಲ್ ಸರಕಾರ್ ಬಂದು, ಶ್ರೀರಾಮಕೃಷ್ಣರ ನಾಡಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಕೇವಲ ಅರ್ಧ ಘಂಟೆ ಮುಂಚೆ ಅವರು ಕಾಲವಾಗಿದ್ದಾರೆ ಎಂದು ತಿಳಿಸಿದರು. ಡಾಕ್ಟರ್‌ರ ವರದಿ ಕೇಳಿ ನಮಗೆ ಮೊದಲಿದ್ದ ಭರವಸೆಯೆಲ್ಲಾ ಹೊರಟುಹೋಯಿತು; ನಾವು ನಿಸ್ಸಹಾಯಕರಾದೆವು; ನಮ್ಮನ್ನು ಅನಾಥಪ್ರಜ್ಞೆ ಕಾಡಿತು. ಡಾ. ಸರಕಾರ್ ೧೦ ರೂಪಾಯಿ ವಂತಿಗೆ ಕೊಟ್ಟು ಶ್ರೀರಾಮಕೃಷ್ಣರ ಮಹಾಸಮಾಧಿಯ ಛಾಯಾಚಿತ್ರ ತೆಗೆಸಿ ಎಂದು ಹೇಳಿ, ಬಹಳ ದುಃಖದಿಂದ ಹೊರಟುಹೋದರು."

ಸಂಜೆ ಸುಮಾರು ಐದು ಗಂಟೆಯ ಹೊತ್ತಿಗೆ ಶ್ರೀರಾಮಕೃಷ್ಣರ ಪವಿತ್ರದೇಹವನ್ನು ಕಾವಿ ಬಟ್ಟೆಯಿಂದ ಸುತ್ತಿ ಮಂಚದ ಮೇಲೆ

ಮಲಗಿಸಲಾಯಿತು; ಗಂಧ ಮತ್ತು ಹಾರಗಳಿಂದ ಅಲಂಕರಿಸಿ ಸಿಂಗರಿಸಲಾಯಿತು. ರಾಮಚಂದ್ರದತ್ತನು ಮಂಚದ ಎದುರು ನಿಂತು ನರೇಂದ್ರನನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡನು. ಉಳಿದ ಶಿಷ್ಯರು ಮತ್ತು ಭಕ್ತರು ಸುತ್ತಲೂ ನಿಂತುಕೊಂಡರು. 'ದಿ ಬೆಂಗಾಲ್ ಫೋಟೋಗ್ರಾಫರ್ಸ್ ಸ್ಟುಡಿಯೋ' ದವರು ಆಗ ಈ ಛಾಯಾಚಿತ್ರ ತೆಗೆದರು. ಇದರಲ್ಲಿ ಒಟ್ಟಿಗೆ ೪೯ ಜನರಿದ್ದರು. ಅವುಗಳ ಪೈಕಿ ೩೩ ಜನರನ್ನು ಗುರುತಿಸಲಾಗಿದೆ.

ಅವರೆಲ್ಲ ಇದ್ದರು. ಈ ಕಟ್ಟಡದಲ್ಲಿ ಕೆಲವು ಅನುಕೂಲತೆಗಳೂ ಇದ್ದವು. ಅವೆಂದರೆ ಅದು ಗಂಗಾನದಿಗೆ ಹತ್ತಿರದಲ್ಲಿ, ಶ್ರೀರಾಮಕೃಷ್ಣರ ಅಂತ್ಯಕ್ರಿಯೆ ನಡೆದ ಸ್ಥಳದ ಸಮೀಪ ಇತ್ತು. ಇದಲ್ಲದೆ ಇಲ್ಲಿ ಪ್ರಶಾಂತ ವಾತಾವರಣ ದೊರಕುತ್ತಿತ್ತು.

ಮಠದಲ್ಲಿ ಕಳೆದ ತೀರ ಬಡತನದ ಜೀವನದ ಬಗ್ಗೆ ಸ್ವಾಮಿ ವಿವೇಕಾನಂದರು ಅನೇಕ ವರ್ಷಗಳ ಬಳಿಕ, ತಮ್ಮ ಶಿಷ್ಯನೊಬ್ಬನ ಮುಂದೆ ಹೀಗೆ ಹೇಳುತ್ತಾರೆ: "ಆ ದಿನಗಳಲ್ಲಿ




ಎಷ್ಟೋ ಬಾರಿ ನಮಗೆ ಊಟಕ್ಕೆ ಏನೇನೂ ಇರುತ್ತಿರಲಿಲ್ಲ. ಕೆಲವು ಸಲ ಅಕ್ಕಿ ಇರುತ್ತಿತ್ತು, ಆದರೆ ಉಪ್ಪೇ ಇರುತ್ತಿರಲಿಲ್ಲ. ಅನ್ನ, ಉಪ್ಪು ಮತ್ತು ಬೇಯಿಸಿದ ಸೊಪ್ಪು ತಿಂದುಕೊಂಡು ತಿಂಗಳುಗಟ್ಟಲೆ ಜೀವಿಸಿದೆವು. ತೀವ್ರತರ ಸಾಧನಾಜೀವನದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೆವು. ನಮ್ಮ ತಪಶ್ಚರ್ಯೆಯ ತೀವ್ರತೆ ಕಂಡು ರಾಕ್ಷಸರೂ ಹೆದರಿ ಓಡಿರಬೇಕು."

### ಚಿತ್ರ ೫

ಶ್ರೀರಾಮಕೃಷ್ಣರು ಮಹಾಸಮಾಧಿಯಾದ ದಿನ ಅಂದರೆ ೧೬.೮.೧೮೮೬ ರ ಸಂಜೆ, ದಿ ಬೆಂಗಾಲ್ ಫೋಟೋಗ್ರಾಫರ್ಸ್ ತೆಗೆದ ಎರಡನೇ ಸಾಮೂಹಿಕ ಛಾಯಾಚಿತ್ರ ಇದು. ಇದರಲ್ಲೂ ೩೨ ಜನ ಶಿಷ್ಯರು ಮತ್ತು ಭಕ್ತಾದಿಗಳು ಇದ್ದಾರೆ. ಇದರಲ್ಲಿ ನರೇಂದ್ರ ಉತ್ತರೀಯವನ್ನು ಧರಿಸಿದ್ದಾನೆ. ಫೋಟೋದಲ್ಲಿ ಇರುವ ಎಲ್ಲಾ ೩೨ ಜನರನ್ನೂ ಗುರುತಿಸಲಾಗಿದೆ.

ಛಾಯಾಚಿತ್ರ ೪ ಮತ್ತು ೫ ರಲ್ಲಿ ಸೆರೆಹಿಡಿಯಲಾದ ಶ್ರೀರಾಮಕೃಷ್ಣರ ಪಾರ್ಥಿವ ಶರೀರವನ್ನು ಉದ್ದೇಶಪೂರ್ವಕವಾಗಿಯೇ ಇಲ್ಲಿ ತೋರಿಸಿಲ್ಲ. ಎಲ್ಲರೂ ಶೋಕತಪ್ತರಾಗಿ ಕಾಶೀಪುರ ಉದ್ಯಾನಗೃಹದ ಮುಂಬಾಗಿಲಿನ ಹತ್ತಿರ ನಿಂತಿದ್ದಾರೆ.

### ಚಿತ್ರ ೬

ಈ ಸಾಮೂಹಿಕ ಛಾಯಾಚಿತ್ರ ೩೦. ೦೧. ೧೮೮೭ ರಂದು ಬಾರಾನಗೋರ್ (ವರಾಹನಗರ) ಮಠದಲ್ಲಿ ತೆಗೆದದ್ದು. 'ದೆವ್ವದ ಮನೆ' ಎಂಬ ಕೀರ್ತಿ ಈ ಕಟ್ಟಡಕ್ಕೆ ಇತ್ತು. ಇದು ಮನುಷ್ಯರ ವಾಸಕ್ಕೆ ಯೋಗ್ಯವಾಗಿರಲಿಲ್ಲ. ಪಾಳು ಬಿದ್ದು ನೆಲ ಅಂತಸ್ತು ಹಾವು ಹಲ್ಲಿಗಳ ಆವಾಸಸ್ಥಾನವಾಗಿತ್ತು. ಶಿಥಿಲವಾದ ಮಾಳಿಗೆಯಲ್ಲಿ ಶ್ರೀರಾಮಕೃಷ್ಣರ ಶಿಷ್ಯರು ವಾಸವಾಗಿದ್ದರು. ಸುತ್ತಲೂ ಕಳೆಗಿಡಗಳು ಬಳ್ಳಿಗಳು ಹೇರಳವಾಗಿ ಬೆಳೆದು ಕಾಡಿನಂತೆ ಇತ್ತು. ಬಾಡಿಗೆ ತುಂಬ ಕಡಮೆ. ಹೀಗಾಗಿ ಇದರಲ್ಲಿ

